<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಿದ ದಿನಾಂಕ**: 18-10-2022.**</u>

**ಪಾಟೀ ಸವಾಲು - 2 ರಿಂದ 5 ನೇ ಪ್ರತಿವಾದಿಗಳ ಪರ ವಕೀಲರಿಂದ**

4) ನಾನು ವ್ಯವಸಾಯ ಮಾಡುತ್ತೇನೆ. ದಾವಾ ಸ್ವತ್ತು ಮೂಲತಃ ನಾರಾಯಣಪ್ಪನವರಿಗೆ ಸೇರಿದ ಜಮೀನು ಇರುತ್ತದೆ. ನಾನು ದಿ.23-06-1998 ರಂದು ನಾರಾಯಣಪ್ಪ ಶ್ರೀರಾಮಯ್ಯನಿಗೆ ಬರೆದುಕೊಟ್ಟ ಕ್ರಯಪತ್ರವನ್ನು ದಾವೆಯಲ್ಲಿ ಹಾಜರು ಮಾಡಿದ್ದೇನೆ. ನಾನು ಸದರಿ ಕ್ರಯಪತ್ರವನ್ನು ಹಾಜರು ಮಾಡದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಿ.ಪಿ.10 ನ್ನು ಸೃಷ್ಟಿಸಿ ಹಾಜರು ಮಾಡಿದ್ದೇನೆಯೇ ವಿನಃ ನಾರಾಯಣಪ್ಪನು ಶ್ರೀರಾಮಯ್ಯನಿಗೆ ಕ್ರಯಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ಎಲ್ಲರೂ ನಾರಾಯಣಪ್ಪನ ಮಕ್ಕಳು ಮತ್ತು ಮೊಮ್ಮಕ್ಕಳು ಎಂದರೆ ಸರಿ. ನಾರಾಯಣಪ್ಪ ಅಥವಾ ಪ್ರತಿವಾದಿಗಳು ನನ್ನ ಹೆಸರಿಗೆ ಯಾವುದೇ ಕ್ರಯಪತ್ರ ಮಾಡಿಕೊಟ್ಟಿಲ್ಲ ಎಂದರೆ ಸರಿ. ಸರ್ವೆ ನಂ.49-3 ರ ಪಹಣಿಗಳನ್ನು ಹಾಜರು ಮಾಡಿರುತ್ತೇನೆ. ನಾನು ಈ ದಾವೆಯಲ್ಲಿ ಯಾವುದೇ ಪಹಣಿಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಆ ಪಹಣಿಗಳಲ್ಲಿ 1 ನೇ ಪ್ರತಿವಾದಿ ರೂಪಾರವರ ಹೆಸರೇ ನಮೂದಾಗುತ್ತಿದೆ. ನಾನು ರಂಗರಾಜು ಕಡೆಯಿಂದ ಕ್ರಯಪತ್ರ ಪಡೆದುಕೊಂಡಿದ್ದೆ. ರಂಗರಾಜುವಿಗೆ ಆಸ್ತಿ ಆತನ ತಂದೆಯಿಂದ ವಿಭಾಗದ ಮೂಲಕ ಬಂದಿತ್ತು. ವಿಭಾಗ ಪತ್ರವನ್ನು ಕೂಡ ಹಾಜರು ಮಾಡಿದ್ದೇನೆ. ನಾನು ಯಾವುದೇ ವಿಭಾಗ ಪತ್ರವನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ನಾರಾಯಣಪ್ಪನನ್ನು ನೋಡಿಲ್ಲ. ನನಗೆ ನಾರಾಯಣಪ್ಪ ಮತ್ತು ಪ್ರತಿವಾದಿಗಳು ಗೊತ್ತಿದ್ದರೂ ಕೂಡ ಸುಳ್ಳು ಹೇಳುತ್ತಿದ್ದೇನೆ ಎಂದರೆ ನಾರಾಯಣಪ್ಪನನ್ನು ನೋಡಿಲ್ಲ,

ಆದರೆ ಪ್ರತಿವಾದಿಗಳನ್ನು ನೋಡಿದ್ದೇನೆ. ಈ ಜಮೀನಿಗೆ ಸಂಬಂಧಿಸಿದಂತೆ ಬೆಂಗಳೂರು ಉತ್ತರ ಜಿಲ್ಲೆಯ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಆರ್.ಎ. ಬಿ.ಎನ್.ಎ. 32/2007-08 ನಡೆದಿತ್ತು ಎಂದರೆ ಸರಿ. ಸದರಿ ಅಪೀಲಿನಲ್ಲಿ ನಾನು 3 ನೇ ಪ್ರತಿವಾದಿ ಎಂದರೆ ಸರಿ. ನಾರಾಯಣಪ್ಪ ಮ್ಯುಟೇಶನ್ ಎಂಟ್ರಿ ರದ್ದುಪಡಿಸಲು ಸದರಿ ಅಪೀಲನ್ನು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಅಪೀಲು ಬಾಕಿ ಇರುವಾಗಲೇ ನಾರಾಯಣಪ್ಪ ಪೌತಿಯಾದರು ಎಂದರೆ ನನಗೆ ಗೊತ್ತಿಲ್ಲ. ಅವರ ವಾರಸುದಾರರಾಗಿ ಪ್ರತಿವಾದಿಗಳು ಕಡತದ ಮೇಲೆ ಬಂದರು ಎಂದರೆ ಸರಿ. ದಿ.27-08-2014 ರಂದು ಮೇಲ್ಮನವಿ ಪುರಸ್ಕೃತವಾಗಿ ಮ್ಯುಟೇಶನ್ ಎಂಟ್ರಿ ರದ್ದು ಮಾಡಿದರು ಎಂದರೆ ಸರಿಯಲ್ಲ. ಸದರಿ ಆದೇಶವನ್ನು ಪ್ರಶ್ನಿಸಿ ನಾನು ಜಿಲ್ಲಾಧಿಕಾರಿಗಳ ಮುಂದೆ ಆರ್.ಪಿ. 412-2015-16 ನ್ನು ಸಲ್ಲಿಸಿದ್ದೇನೆ ಎಂದರೆ ಸರಿ. ನನ್ನ ಅಪೀಲು ದಿ.12-12-2019 ರಂದು ವಜಾ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆದೇಶವನ್ನು ಪ್ರಶ್ನಿಸಿ ನಾನು ರಿಟ್ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿ. ಸಾಕ್ಷಿಯು ಅವರಿಗೆ ಅನಾನುಕೂಲವಾಗುವ ಪ್ರಶ್ನೆಗಳಿಗೆ ಗೊತ್ತಿಲ್ಲವೆಂಬ ಉತ್ತರ ನೀಡುತ್ತಿರುವುದನ್ನು ನ್ಯಾಯಾಲಯ ಗಮನಿಸಿರುತ್ತದೆ. ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಜಿಲ್ಲಾಧಿಕಾರಿಗಳು ಮಾಡಿದ ಆದೇಶದ ಬಗ್ಗೆ ವಿಚಾರಣೆ ಇನ್ನೂ ಬಾಕಿ ಇರುತ್ತದೆ ಎಂದರೆ ಸರಿ. ನನಗೆ ಮ್ಯುಟೇಶನ್ ಆದೇಶ ವಜಾ ಆಗಿರುವ ಸಂಗತಿ ಗೊತ್ತಿದ್ದರೂ ಕೂಡ ಉದ್ದೇಶಪೂರಿತವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1988 ರಲ್ಲಿ ನಾರಾಯಣಪ್ಪ ಬಾಗೇಪಲ್ಲಿಯಲ್ಲಿ ವಾಸ ಮಾಡುತ್ತಿದ್ದರು ಎಂದರೆ ಬಾಗೇಪಲ್ಲಿಯಲ್ಲಿ ವಾಸ ಮಾಡುತ್ತಿದ್ದರು, ಆದರೆ ಬಂದು ಕ್ರಯಪತ್ರ

ಮಾಡಿಕೊಟ್ಟಿದ್ದಾರೆ. ನಾರಾಯಣಪ್ಪ 1988 ರಲ್ಲಿ ಬಾಗೇಪಲ್ಲಿಯಿಂದ ಬಂದು ಶ್ರೀರಾಮಯ್ಯನಿಗೆ ಕ್ರಯಪತ್ರ ಮಾಡಿಕೊಟ್ಟಿದ್ದನ್ನು ನಾನು ಕಣ್ಣಾರೆ ನೋಡಿರುವುದಿಲ್ಲ. ನಾರಾಯಣಪ್ಪ ತನ್ನ ಜೀವಿತಾವಧಿಯಲ್ಲಿ ಯಾವ ಯಾವ ವ್ಯವಹಾರಗಳನ್ನು ಮಾಡಿದ್ದಾರೆಂದು ನನಗೆ ಗೊತ್ತಿಲ್ಲವೆಂದರೆ ಸರಿ. ಎ.ಸಿ.ಯವರು ಮಾಡಿದ ಮ್ಯುಟೇಶನ್ ರದ್ದತಿ ಆದೇಶವಾದ ನಂತರ ದಿ.18-06-2007 ರಂದು ನಾರಾಯಣಪ್ಪ 1 ನೇ ಪ್ರತಿವಾದಿಗೆ ವಿಲ್ ಬರೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಲ್ ಆಧಾರದ ಮೇಲೆ 1 ನೇ ಪ್ರತಿವಾದಿಗೆ ಎಂ.ಆರ್.ಹೆಚ್. ನಂ.3-2015-16 ರಂತೆ ಖಾತೆ ಬದಲಾವಣೆ ಆಗಿದೆ ಎಂದರೆ ವಿಲ್ ಮೂಲಕ ಆಗಿಲ್ಲ, ಬೇರೆ ರೀತಿಯಲ್ಲಿ ಆಗಿರುತ್ತದೆ. ಆದ್ದರಿಂದ ನಾರಾಯಣಪ್ಪ ರವರ ಜೀವಿತಾವಧಿ ವರೆಗೆ ಅವರು ಮತ್ತು ಅವರ ನಂತರ ಅವರ ವಾರಸುದಾರರೇ ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. 2011 ರಲ್ಲಿ ನಾನು ಪ್ರತಿವಾದಿಗಳ ಸ್ವಾಧೀನಕ್ಕೆ ತೊಂದರೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಆದ್ದರಿಂದ 1 ನೇ ಪ್ರತಿವಾದಿ ನನ್ನ ವಿರುದ್ಧ ಒ.ಎಸ್.ನಂ.439-2011 ನ್ನು ಸಲ್ಲಿಸಿದ್ದರು ಎಂದರೆ ಹೌದು, ಅದು ವಜಾ ಆಗಿದೆ. ವಜಾ ಆದ ತೀರ್ಪಿನ ವಿರುದ್ಧ ಆರ್.ಎಫ್.ಎ. 1262-2016 ಬಾಕಿ ಇದೆ ಎಂದರೆ ಸರಿ. ಇಷ್ಟೆಲ್ಲಾ ಪ್ರಕರಣಗಳು ಬಾಕಿ ಇದ್ದರೂ ಕೂಡ ನಾನು ಪ್ರತಿವಾದಿಗಳ ವಿರುದ್ಧ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.12 ಅಧಿಕೃತ ಜ್ಞಾಪನವು 18-03-2009 ರ ದಿನಾಂಕದ್ದು ಎಂದರೆ ಸರಿ. ಸರ್ವೆ ನಂ.49-3 ರ ಒಟ್ಟು ವಿಸ್ತೀರ್ಣ ಎಷ್ಟು ಎಂದರೆ ಸಾಕ್ಷಿಗೆ ಉತ್ತರಿಸಲು ಸಾಧ್ಯವಾಗಿಲ್ಲ. ನಾನು ಸರ್ವೆ ನಂ.49-3 ರನ್ನು ಹೊರತುಪಡಿಸಿ ಬೇರೆ ಜಮೀನು ಖರೀದಿ

ಮಾಡಿದ್ದುಂಟೇ? ಎಂದರೆ ಇನ್ನೂ 7 ಗುಂಟೆ ಖರೀದಿ ಮಾಡಿದ್ದೇನೆ. ನಿ.ಪಿ.12 ರ ಷರತ್ತಿನಲ್ಲಿ ಭೂಮಿ ಯಾವ ಉದ್ದೇಶಕ್ಕೆ ಪರಿವರ್ತನೆ ಆಗಿದೆಯೋ ಆ ಉದ್ದೇಶಕ್ಕೆ ಬೈಯಪಾ ದಿಂದ ಮಂಜೂರಾತಿ ಪಡೆಯದ ಹೊರತು ಸದರಿ ಆದೇಶ ಯಾವುದೇ ಹಕ್ಕು ನೀಡುವುದಿಲ್ಲವೆಂದು ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಾನು ಸದರಿ ಷರತ್ತಿನಂತೆ ಬೈಯಪಾ ದಿಂದ ಮಂಜೂರಾತಿ ಪಡೆದಿದ್ದೇನೆ. ಪಡೆದ ಬಗ್ಗೆ ದಾಖಲೆ ಹಾಜರು ಮಾಡಿದ್ದೇನೆ. ನಾನು ಬೈಯಪಾದಿಂದ ಮಂಜೂರಾತಿ ಪಡೆದಿಲ್ಲ ಮತ್ತು ಯಾವುದೇ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಬೈಯಪಾದಿಂದ ಅನುಮೋದಿತವಾದ ನಕ್ಷೆ ಪಡೆದಿದ್ದೀರಾ? ಎಂದರೆ ಪಡೆದಿದ್ದೇನೆ. ನಕ್ಷೆ ಹಾಜರು ಮಾಡಿದ್ದೀರಾ? ಎಂದರೆ ಮಾಡಿದ್ದೇನೆ. ನನ್ನ ದಾಖಲೆಗಳಲ್ಲಿ ಅನುಮೋದಿತ ನಕ್ಷೆ ಕಾಣುತ್ತಿಲ್ಲ ಎಂದರೆ ಸಾಕ್ಷಿಯು ಕೊಟ್ಟಿದ್ದೇನೆ ಎಂದಿದ್ದಾರೆ. ಬೈಯಪಾದಿಂದ ನಾನು ಮಂಜೂರಾತಿ ಮತ್ತು ಅನುಮೋದಿತ ನಕ್ಷೆ ಯಾವುದನ್ನೂ ಪಡೆದಿಲ್ಲ ಎಂದರೆ ಸರಿಯಲ್ಲ.

**(**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಿತು**).**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**